2. ಇಲಾಖೆಯಲ್ಲಿರುವ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಮತ್ತು ಸಾರ್ವಜನಿಕರಿಗೂ ಕುಷ್ಟರೋಗದ ಬಗ್ಗೆ ತರಬೇತಿ ನೀಡುವ ವ್ಯವಸ್ಥೆ ಮಾಡಲಾಗಿದೆ.

3. ಕುಷ್ಟರೋಗ ಕಾರ್ಯಕ್ರಮವನ್ನು ಸಾಮಾನ್ಯ ಆರೋಗ್ಯ ಕಾರ್ಯಕ್ರಮದಲ್ಲಿ ವಿಲೀನಗೊಳಿಸಲಾಗಿದೆ ಮತ್ತು ಅದನ್ನು ಕಾರ್ಯರೂಪಕ್ಕೆ ತರಲಾಗಿದೆ.

4. SAPEL (ವಿಶೇಷ ಕುಷ್ಟರೋಗ ನಿರ್ಮೂಲನಾ ಕ್ರಿಯಾ ಯೋಜನೆ) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

5. ಭಾರತ ಸರ್ಕಾರದ ಸಹಾಯದಿಂದ ರಾಜ್ಯದಲ್ಲಿ 4 ಮಾರ್ಪಾಡಿತ ಕುಷ್ಟರೋಗ ನಿರ್ಮೂಲನಾ ಆಂದೋಲನಾ ಕಾರ್ಯಕ್ರಮವನ್ನು ನೆರವೇರಿಸಲಾಗಿದೆ. ಈ ಆಂದೋಲನವು ಜನಸಂಖ್ಯಾ ಸಮೀಕ್ಷೆ, ಶಿಕ್ಷಣ, ತಾವಾಗಿಯೇ ಕೇಂದ್ರಕ್ಕೆ ಹೋಗುವುದು. ಸಂಶಯಾಸ್ಪದ ಕುಷ್ಟರೋಗಿಗಳನ್ನು ಪತ್ತೆ ಹಚ್ಚುವುದು. ತಜ್ಞರಿಂದ ದೃಢೀಕರಿಸಿ ಅಗತ್ಯ ಚಿಕಿತ್ಸೆ ನೀಡಲಾಗುತ್ತದೆ. ಐದು ಸ್ವಯಂ ಸೇವಾ ಸಂಸ್ಥೆಗಳಿಗೆ ಸರ್ಕಾರ ಸಹಾಯಧನ ಮಾಡುತ್ತಿದೆ.

ಧಾರವಾಡ ಜಿಲ್ಲೆಯಲ್ಲಿನ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಬಿಡುಗಡೆಯಾದ ಹಣ

256 (363) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ)- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಘಟಕ ಹಾಗೂ ಆರೋಗ್ಯ ಕೇಂದ್ರಗಳಿವೆ ; (ತಾಲ್ಲೂಕುವಾರು ವಿವರ ನೀಡುವುದು) ;

ಆ) ಪ್ರತಿಯೊಂದು ಹಳ್ಳಿಯಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ;

ಇ) ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಗೆ ಕಟ್ಟಡ, ಔಷಧಿ ಇನ್ನಿತರೆ ಕಾರ್ಯಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಹಾಗೂ ಖರ್ಚು ಮಾಡಿದ ಹಣವೆಷ್ಟು ; ಖರ್ಚು ಮಾಡದೇ ಉಳಿದ ಹಣವೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ)

	ಪ್ರಾ.ಆ.ಕೇಂ.	ಪ್ರಾ.ಆ.ಘಟಕ
1. ಧಾರವಾಡ ತಾಲ್ಲೂಕು	6	0
2. ಹುಬ್ಬಳ್ಳಿ	5	1
3. ಕಲಘಟಗಿ	5	0
4. ಕುಂದಗೋಳ	5	1
5. ನವಲಗುಂದ	5	0
ಒಟ್ಟು	**26**	**2**

ಆ) ಇಲ್ಲ

ಇ)

ವರ್ಷ	ಅನುದಾನ ಹಂಚಿಕೆ	ಖರೀದಿಸಲಾದ ಔಷಧಿಗಳ ಮೌಲ್ಯ	ಉಳಿತಾಯ ಲಕ್ಷಗಳಲ್ಲಿ
2000-01	14.32	13.68	00.64
2001-02	15.68	15.63	00.05
2002-03	25.68	17.48	

ಕಟ್ಟಡಗಳಿಗೆ	ಬಿಡುಗಡೆಯಾದದ್ದು	ಖರ್ಚಾದದ್ದು
1999-2000	45.41 ಲಕ್ಷ	45.41 ಲಕ್ಷ
2000-2001	76.66 ಲಕ್ಷ	76.66 ಲಕ್ಷ
2001-2002	111.54 ಲಕ್ಷ	108.40 ಲಕ್ಷ

ಸಿ.ಇ.ಟಿ. ಯನ್ನು ಮುಂದುವರಿಸುವ ಬಗ್ಗೆ

257 (366) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ)- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಿ.ಇ.ಟಿ.ಯನ್ನು ಅಸ್ತಿತ್ವದಲ್ಲಿರಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮವೇನು ;

ಆ) ಸಿ.ಇ.ಟಿ.ಯಿಂದ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಒಳ್ಳೆಯ ಹೆಸರಿದ್ದು, ಇದು ರದ್ದಾದರೆ ಈ ಕ್ಷೇತ್ರದಲ್ಲಿಯ ಗಳಿಸಿರುವ ಹೆಸರು ಕೆಟ್ಟು ಹೋಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇದನ್ನು ರದ್ದುಪಡಿಸುವ ನ್ಯಾಯಾಲಯದ ಆದೇಶ ಇರುವುದು ನಿಜವೇ ? ಕಾನೂನಿನ ಒಳಗೊಂಡ ಈ ಸೂಕ್ಷ್ಮ ವಿಚಾರವನ್ನು ಸರ್ಕಾರ ನಿಭಾಯಿಸಿರುವ ಸೂಕ್ತ ಕ್ರಮಗಳಾವುವು?

ಡಾ|| ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕವು ಸಾಮಾನ್ಯ ಪ್ರವೇಶ ಪರೀಕ್ಷೆ 2003 ದಿನಾಂಕ 30-05-2003 ಮತ್ತು 31.5.2003 ರಂದು ನಡೆಸಲು ಸರ್ಕಾರವು ಅನುಮತಿ ನೀಡಿದೆ.

ಆ) ಅಂಶ (1)ಕ್ಕೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲ, ಅಂಶ (1)ಕ್ಕೆ ನೀಡಿರುವ ಉತ್ತರದಲ್ಲಿ ತಿಳಿಸಿದಂತೆ ಸಾಮಾನ್ಯ ಪ್ರವೇಶ ಪರೀಕ್ಷೆ 2003ನ್ನು ನಡೆಸಲು ಈಗಾಗಲೇ ಕ್ರಮ ಜರುಗಿಸಲಾಗಿದೆ.

ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಅನುದಾನ

258 (369) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ)- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :-

ಅ) ಕಳೆದ ಮೂರು ವರ್ಷಗಳಲ್ಲಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆ ಕಟ್ಟಡಗಳ ದುರಸ್ತಿ ಹಾಗೂ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಸರಕಾರ ಬಿಡುಗಡೆ ಮಾಡಿದ ಹಣವೆಷ್ಟು ; (ವರ್ಷವಾರು ಮತ್ತು ವಿವಿಧ ಬಾಬ್ತಿನಲ್ಲಿ ಬಿಡುಗಡೆ ಮಾಡಿದ ವಿವರ ಒದಗಿಸುವುದು) ;

ಆ) ಈ ಅನುದಾನವನ್ನು ವೆಚ್ಚ ಮಾಡಿರುವ ವಿವರಗಳೇನು ;